ಗದ್ದುಗೆಗೆ ಗುದ್ದಾಟ

8

ಬಾರಿ ಗೆಲುವು

ಹುಕ್ಕೇರಿ ವಿಧಾನಸಭಾ ಮತಕ್ಷೇತ್ರಕ್ಕೆ ನಡೆದ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿಯೂ ಆದ ಶಾಸಕ ಉಮೇಶ ಕತ್ತಿ 1985 ಉಪಚುನಾವಣೆಯಿಂದ ಈವರೆಗೆ 9 ಬಾರಿ ವಿಧಾನ ಸಭೆ ಚುನಾವಣೆಗೆ ಸ್ಪರ್ಧೆಸಿದ್ದು, 8 ಬಾರಿಗೆ ಗೆಲುವು ಸಾಧಿಸಿ ದಾಖಲೆ ಮಾಡಿದ್ದಾರೆ.

ಜಿಟಿ ದೇವೇಗೌಡ

ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಸಿಎಂ ಸಿದ್ದರಾಮಯ್ಯ ವಿರುದ್ಧ ಸ್ಪರ್ಧಿಸಿದ್ದ ಜೆಡಿಎಸ್ ಅಭ್ಯರ್ಥಿ ಜಿ.ಟಿ.ದೇವೇಗೌಡ 1,21,325 ಮತಗಳನ್ನು ಪಡೆದು 32,042 ಮತಗಳ ಅಂತರದಿಂದ ಗೆಲವು ಸಾಧಿಸಿದ್ದಾರೆ. ಸಿದ್ದರಾಮಯ್ಯ 85,283 ಮತಗಳನ್ನು ಪಡೆದು ಸೋಲನುಭವಿಸಿದ್ದು, ಬಿಜೆಪಿ ಅಭ್ಯರ್ಥಿ ಎಸ್.ಆರ್.ಗೋಪಾಲರಾವ್ 12,604 ಮತಗಳನ್ನು ಪಡೆದು ತೃತೀಯ ಸ್ಥಾನ ಪಡೆದಿದ್ದಾರೆ.

ಟ್ವೀಟು ಬಾರ

ಪ್ರಶಾಂತ್ ಪಿ. ಉಮ್ರಾವೊ
@ippatel

ಕರ್ನಾಟಕ ಚುನಾವಣೆಯಲ್ಲಿ ಎಎಪಿ ಸ್ಪರ್ಧಿಸಿದ್ದ 28 ಕ್ಷೇತ್ರಗಳಲ್ಲೂ ಠೇವಣಿ ಕಳೆದುಕೊಂಡಿದೆ. ಇದರೊಂದಿಗೆ ಆಮ್ ಪಕ್ಷ ತನ್ನ ದಾಖಲೆ ಮುಂದುವರಿಸಿದೆ. ಈ ಚುನಾವಣೆಯಲ್ಲಿ ಎಎಪಿಗೆ ಒಟ್ಟು 21,264 ಮತಗಳನ್ನು ಹೊಂದಿದ್ದರೆ, ನೋಟಾ ಮತಗಳ ಪ್ರಮಾಣ 41,493ರಷ್ಟಿದೆ.

ಜೋತಿಮಣಿ
@jothims

ಗೋವಾ ಹಾಗೂ ಮೇಘಾಲಯಗಳಲ್ಲಿ ಹೆಚ್ಚು ಸ್ಥಾನ ಪಡೆದಿದ್ದ ಕಾಂಗ್ರೆಸ್‌ಗೆ ಮೊದಲು ಸರಕಾರ ರಚಿಸಲು ಅವಕಾಶ ಸಿಕ್ಕಿರಲಿಲ್ಲವೇಕೆ? ಎಂಬ ಪ್ರಶ್ನೆಯೊಂದಿಗೆ ಯಡಿಯೂರಪ್ಪನವರ ಪತ್ರಿಕಾಗೋಷ್ಠಿ ಅಂತ್ಯವಾಗಿದೆ.

ಹರ್ಷ ಗೋಯೆಂಕಾ
@hvgoenka

ಕೆಲವೊಮ್ಮೆ ನಾವು ಗೆದ್ದು ಸೋಲುತ್ತೇವೆ. ಸೋತು ಗೆಲ್ಲುತ್ತೇವೆ. ಗೆಲುವು ಹಾಗೂ ಸೋಲುಗಳು ಪರಸ್ಪರ ಯಾಂತ್ರಿಕವಾಗಿ ಕೆಲಸ ಮಾಡುತ್ತವೆ. ಅದರಿಂದ ನಮಗೆ ಬೇಕಾದ ಅಗತ್ಯಗಳನ್ನು ನಾವು ಪೂರೈಸಿಕೊಳ್ಳಬೇಕಷ್ಟೇ.

ಜಿಲ್ಲೆ ವಿಶ್ಲೇಷಣೆ

ಬೀದರ್

ಕಾಂಗ್ರೆಸ್	ಬಿಜೆಪಿ	ಜೆಡಿಎಸ್
04	01	01

‘ಕೈ’ ಹಿಡಿದ ಬೀದರ್ ಜನತೆ

ಬೀದರ್: ಅಬ್ಬರದ ಪ್ರಚಾರ, ಭಾಗ್ಯ ಯೋಜನೆಗಳ ಪ್ರಚಾರವು ಫಲ ಕೊಟ್ಟಿದೆ. ಜಿಲ್ಲೆಯ ಆರು ವಿಧಾನಸಭಾ ಕ್ಷೇತ್ರಗಳ ಪೈಕಿ ನಾಲ್ಕರಲ್ಲಿ ಕಾಂಗ್ರೆಸ್ ಗೆಲುವು ಪಡೆದಿದೆ. ಗೆದ್ದೇ ತೀರುವ ವಿಶ್ವಾಸದಲ್ಲಿದ್ದ ಬಿಜೆಪಿ ನಿರೀಕ್ಷೆಯಂತೆ ಔರಾದ್ ಕ್ಷೇತ್ರದಲ್ಲಿ ಗೆದಿದ್ದು, ಜೆಡಿಎಸ್‌ನ ಬಂಡೆಪ್ಪ ಖಾಶಂಪುರ ಅವರನ್ನು ಗೆಲ್ಲಿಸಿ ಕಾಂಗ್ರೆಸ್‌ನ ಅಶೋಕ ಖೇಣಿ ಅವರ ಕೈಬಿಟ್ಟಿದ್ದಾರೆ. ಬೀದರ್ ಕೋಟೆ ಮತ್ತೆ ಕೈವಶವಾಗಿದೆ. ಸಾರ್ವತ್ರಿಕ ಚುನಾವಣೆಯಲ್ಲೂ ಗೆಲ್ಲುವು ಕಂಡಿರುವ ಕಾಂಗ್ರೆಸ್‌ನ ರಹೀಂ ಖಾನ್ ಅವರ ಗೆಲುವು ಬರೀ ಉಪಚುನಾವಣೆಗಷ್ಟೇ ಸೀಮಿತವಾಗಿಲ್ಲ ಎಂಬುದು ಸಾಬೀತುಪಡಿಸಿದ್ದಾರೆ. ಬಿಜೆಪಿಯ ಸೂರ್ಯಕಾಂತ ನಾಗಮಾರಪಳ್ಳಿ ಸೋತು ಮನೆನಡೆದಿದ್ದಾರೆ. ಭಾಲ್ಕಿ ಕ್ಷೇತ್ರದಲ್ಲಿ ಹ್ಯಾಟ್ರಿಕ್ ಬಾರಿಸಿದ ಕಾಂಗ್ರೆಸ್ ಅಭ್ಯರ್ಥಿ ಈಶ್ವರ ಖಂಡ್ರೆ, ಬಿಜೆಪಿ ಅಭ್ಯರ್ಥಿ ಸಿದ್ರಾಮ ಡಿಕೆ ವಿರುದ್ಧ ಸತತ ಮೂರನೇ ಬಾರಿ ಗೆದ್ದಿದ್ದಾರೆ. ಬಿಜೆಪಿ ತೊರೆದು ಜೆಡಿಎಸ್ ಅಭ್ಯರ್ಥಿಯಾಗಿ ಕಣಕ್ಕಿಳಿದಿದ್ದ ಪ್ರಕಾಶ ಖಂಡ್ರೆ ಹೀನಾಯವಾಗಿ ಸೋತಿದ್ದಾರೆ ಕಲ್ಯಾಣದಲ್ಲಿ ಎಲ್ಲ ಚುನಾವಣೆಗಳಲ್ಲಿ ಸೋಲು ಕಂಡಿದ್ದ ಕಾಂಗ್ರೆಸ್‌ನ ಬಿ. ನಾರಾಯಣರಾವ್ ಅದ್ಭುತ ಗೆಲುವು ಪಡೆದಿದ್ದಾರೆ. ಜೆಡಿಎಸ್ ತೊರೆದು ಬಿಜೆಪಿ ಸೇರಿ ಕಣಕ್ಕಿಳಿದಿದ್ದ ಮಲ್ಲಿಕಾರ್ಜುನ ಖೂಬಾ ಅವರನ್ನು ಮತದಾರರು ತಿರಸ್ಕರಿಸಿದ್ದಾರೆ. ಜೆಡಿಎಸ್‌ನ ಪಿಜಿಆರ್ ಸಿಂಧ್ಯಾ ಮತದಾರರ ವಿಶ್ವಾಸಕ್ಕೆ ಅನರ್ಹರಾಗಿದ್ದಾರೆ. ಬೀದರ್ ದಕ್ಷಿಣದಲ್ಲಿ ಕಾಂಗ್ರೆಸ್‌ನ ಅಶೋಕ ಖೇಣಿ ಅವರನ್ನು ಮತದಾರರ ತಿರಸ್ಕರಿಸಿದ್ದು, ಜೆಡಿಎಸ್‌ನ ಬಂಡೆಪ್ಪ ಖಾಶಂಪುರ ಸುಲಭದ ಗೆಲುವು ಪಡೆದಿದ್ದಾರೆ. ಹುಮನಾಬಾದ್‌ನಲ್ಲಿ ಕಾಂಗ್ರೆಸ್‌ನ ರಾಜಶೇಖರ ಪಾಟೀಲ್, ಔರಾದ್‌ನಲ್ಲಿ ಬಿಜೆಪಿಯ ಪ್ರಭು ಚಹ್ವಾಣ್ ಗೆಲುವು ಸಾಧಿಸಿದ್ದಾರೆ.

ಕಲಬುರಗಿ

ಕಾಂಗ್ರೆಸ್	ಬಿಜೆಪಿ	ಜೆಡಿಎಸ್
05	04	00

ದಕ್ಷಿಣ ಮತ ಕ್ಷೇತ್ರ ಬಿಜೆಪಿ ಸ್ವತ್ತು

ಕಲಬುರಗಿ: ಒಂಬತ್ತು ಕ್ಷೇತ್ರಗಳ ಪೈಕಿ ಕಲಬುರಗಿ ದಕ್ಷಿಣ ಮತಕ್ಷೇತ್ರ ಮಾತ್ರ ಬಿಜೆಪಿಯ ಸೊತ್ತಾಗಿದೆ. ಹಾಲಿ ಶಾಸಕ ಬಿಜೆಪಿ ಅಭ್ಯರ್ಥಿ ದತ್ತಾತ್ರೇಯ ಪಾಟೀಲ ರೇವೂ, ಕಾಂಗ್ರೆಸ್‌ನ ಅಭ್ಯರ್ಥಿ ಅಲ್ಲಮಪ್ರಭು ಪಾಟೀಲ ಹಾಗೂ ಜೆಡಿಎಸ್‌ನ ಬಸವರಾಜ ಡಿಗ್ಗಾವಿಯನ್ನು ಸೋಲಿಸಿದ್ದಾರೆ.

ಬಿಜೆಪಿ ಅಭ್ಯರ್ಥಿ ಮಾಲೀಕಯ್ಯ ಗುತ್ತೇದಾರ ಕಾಂಗ್ರೆಸ್ ಅಭ್ಯರ್ಥಿ ಎಂ.ವೈ ಪಾಟೀಲ ವಿರುದ್ಧ ಸೋತಿದ್ದಾರೆ. ಸೇಡಂ ಕ್ಷೇತ್ರದಲ್ಲಿ ಈ ಹಿಂದೆ ಮೂರು ಬಾರಿ ಸೋತ ಬಿಜೆಪಿ ಅಭ್ಯರ್ಥಿ ರಾಜಕುಮಾರ ಪಾಟೀಲ ತೇಲ್ಕೂರ ಗೆದ್ದಿದ್ದಾರೆ. ಹ್ಯಾಟ್ರಿಕ್ ಭಾರಿಸಿದ್ದ ಕಾಂಗ್ರೆಸ್ ಸಚಿವ ಡಾ. ಶರಣಪ್ರಕಾಶ ಪಾಟೀಲ ಸೋತಿದ್ದಾರೆ. ಚಿತ್ತಾಪುರ ಮಿಸಲು ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಪ್ರಿಯಾಂಕ್ ಖರ್ಗೆ ಎರಡನೇ ಬಾರಿ ಗೆಲುವು ದಾಖಲಿಸಿದ್ದಾರೆ.ಬಿಜೆಪಿ ಅಭ್ಯರ್ಥಿ ವಾಲ್ಮೀಕಿ ನಾಯಕ ಅವರನ್ನು ಸೋಲಿಸಿದ್ದಾರೆ.

ಕಲಬುರಗಿ ಗ್ರಾಮೀಣ ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿ ಬಸವರಾಜ ಮತ್ತಿಮುಡು ಗೆದ್ದಿದ್ದಾರೆ. ಕಲಬುರಗಿ ಉತ್ತರ ಮತಕ್ಷೇತ್ರದಲ್ಲಿ ಈ ಬಾರಿ ಖಮರುಲ್ ಪತ್ನಿ ಕನೀಜ್ ಫಾತಿಮಾ ಗೆದ್ದಿದ್ದಾರೆ. ಬಿಜೆಪಿ ಅಭ್ಯರ್ಥಿ ಚಂದ್ರಕಾಂತ ಪಾಟೀಲ, ಜೆಡಿಎಸ್ ಅಭ್ಯರ್ಥಿ ನಾಸಿರ್ ಹುಸೇನ್ ಉಸ್ತಾದ್ ಅವರನ್ನು ಸೋಲಿಸಿದ್ದಾರೆ. ಆಳಂದ ಮತಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿ ಸುಭಾಷ ಗುತ್ತೇದಾರ ಗೆದ್ದಿದ್ದು, ಕಾಂಗ್ರೆಸ್ ಅಭ್ಯರ್ಥಿ ಬಿ.ಆರ್.ಪಾಟೀಲರನ್ನು ಹಿಂದಿಕ್ಕಿದ್ದಾರೆ. ಚಿಂಚೋಳಿ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಡಾ. ಉಮೇಶ ಜಾಧವ ಅವರು ಗೆಲುವು ಪಡೆದಿದ್ದಾರೆ. ಜೇವರ್ಗಿ ಕ್ಷೇತ್ರದಲ್ಲಿ ಧರ್ಮಸಿಂಗ್ ಅವರ ಪುತ್ರ ಡಾ. ಅಜಯ ಸಿಂಗ್ ಅವರು ಎರಡನೇ ಬಾರಿಗೆ ಗೆದ್ದಿದ್ದಾರೆ. ಬಿಜೆಪಿ ಅಭ್ಯರ್ಥಿ ದೊಡ್ಡಪಗೌಡ ಪಾಟೀಲ ಸೋತಿದ್ದಾರೆ.

ವಿಜಯಪುರ

ಕಾಂಗ್ರೆಸ್	ಬಿಜೆಪಿ	ಜೆಡಿಎಸ್
03	03	02

ಅಚ್ಚರಿ ತಂದ ಫಲಿತಾಂಶ

ವಿಜಯಪುರ: ಬಹು ಅಚ್ಚರಿಯಿಂದ ಎಲ್ಲರೂ ಕಾಯುತ್ತಿದ್ದ ವಿಧಾನಸಭಾ ಚುನಾವಣಾ ಫಲಿತಾಂಶ ಹೊರಬಿದ್ದಿದೆ. ವಿಜಯಪುರ ಜಿಲ್ಲೆಯಲ್ಲಿ ಗೆಲುವು ಯಾರಿಗೆ ಎಂಬ ಕುತೂಹಲ ಮನೆ ಮಾಡಿತ್ತು. ವಿಜಯಪುರ ಜಿಲ್ಲೆಯಲ್ಲಿ ಕಾಂಗ್ರೆಸ್ ಪಾರಮ್ಯ ಮುರಿಯುವಲ್ಲಿ ಬಿಜೆಪಿ ಜೆಡಿಎಸ್ ಯಶಸ್ವಿಯಾಗಿದ್ದು ಮತದಾರರ ಎಲ್ಲರಿಗೂ ಸಮಪಾಲು ನೀಡಿದ್ದಾನೆ. ಜಿಲ್ಲೆಯಲ್ಲಿ ಒಟ್ಟು ಎಂಟು ಕ್ಷೇತ್ರಗಳಿದ್ದು, ಬಿಜೆಪಿ ಮೂರು ಕ್ಷೇತ್ರಗಳನ್ನು ಗೆದ್ದು ಬೀಗುತ್ತಿದೆ. ಕಾಂಗ್ರೆಸ್ ಕೂಡ ತಾನೇನೂ ಕಡಿಮೆ ಇಲ್ಲ ಎನ್ನುವಂತೆ, ಬಿಜೆಪಿಗೆ ಸಮನಾಗಿ ಎರಡು ಸ್ಥಾನ ಪಡೆದು ಸಮಾಧಾನಪಟ್ಟಿದೆ. ಅಂತೆಯೇ ಜೆಡಿಎಸ್ ಕೂಡ ಎರಡು ಸ್ಥಾನ ಪಡೆದು ತೃಪ್ತಿಗೊಂಡಿದೆ.

ಕಳೆದ ಬಾರಿ ಎಂಟರಲ್ಲಿ ಏಳು ಕ್ಷೇತ್ರ ಗೆದ್ದು ಬೀಗಿದ್ದ ಕಾಂಗ್ರೆಸ್‌ಗೆ ಈ ಬಾರಿ ಲಕ್ ಕೈ ಕೊಟ್ಟಿದೆ. ಕೇವಲ ಮೂರು ಸ್ಥಾನ ಗೆಲ್ಲುವಲ್ಲಿ ಮಾತ್ರ ಕಾಂಗ್ರೆಸ್ ಯಶ ಕಂಡಿದೆ. ಇದು ಕಾಂಗ್ರೆಸಿಗರಿಗೆ ಬೇಸರದ ಸಂಗತಿ. ಜಿಲ್ಲೆಯಾದ್ಯಂತ ಅಭಿವೃದ್ಧಿ ಪರ್ವ ನಡೆಸಿದ್ದ ಎಂ.ಬಿ. ಪಾಟೀಲರು ಬಬಲೇಶ್ವರದಲ್ಲಿ ಭಾರಿ ಅಂತರದ ಗೆಲವು ಸಾಧಿಸಿದ್ದಾರೆ. ವಿಜಯಪುರ ನಗರದಲ್ಲಿ ಹಳೆ ಹುಲಿ ಬಸನಗೌಡ ಪಾಟೀಲ ಯತ್ನಾಳ ಗೆಲವು ಸಾಧಿಸಿದ್ದಾರೆ. ಬಸವನ ಬಾಗೇವಾಡಿಯಲ್ಲಿ ಶಿವಾನಂದ ಪಾಟೀಲ ಪುನರಾಯ್ಕೆಯಾಗಿದ್ದರೆ ಮುದ್ದೇಬಿಹಾಳದಲ್ಲಿ ಕೈ ಬಿಟ್ಟು, ಕೆಲಕಾಲ ಜೆಡಿಎಸ್‌ನಲ್ಲಿದ್ದು ಕೊನೆ ಗಳಿಗೆಯಲ್ಲಿ ಕಮಲ ಸೇರಿದ ಎ.ಎಸ್. ಪಾಟೀಲ ನಡಹಳ್ಳಿ ಸತತ ಐದು ಬಾರಿ ಆಯ್ಕೆಯಾಗಿದ್ದ ಸಿ.ಎಸ್. ನಾಡಗೌಡರಿಗೆ ಸೋಲುಣಿಸಿದ್ದಾರೆ. ನಾಗಠಾಣ ಮತ್ತು ಸಿಂದಗಿಯಲ್ಲಿ ಜೆಡಿಎಸ್ ಗೆಲವು ಸಾಧಿಸಿದೆ.

ಯಾದಗಿರಿ

ಕಾಂಗ್ರೆಸ್	ಬಿಜೆಪಿ	ಜೆಡಿಎಸ್
01	02	01

ಕೈಗೆ ಹೀನಾಯ ಸೋಲು

ಯಾದಗಿರಿ: ಕರ್ನಾಟಕ ವಿಧಾನ ಸಭೆಗೆ ನಡೆದ ಚುನಾವಣೆಯಲ್ಲಿ ಕೈ ಭದ್ರಕೋಟೆಯನ್ನು ಛಿದ್ರಗೊಳಿಸುವಲ್ಲಿ ಬಿಜೆಪಿ ಮತ್ತು ಜೆಡಿಎಸ್ ಯಶಸ್ವಿಯಾಗಿದ್ದು, ಖರ್ಗೆ ಕ್ಷೇತ್ರದಲ್ಲಿ ಕೈ ಹೀನಾಯ ಸೋಲು ಅನುಭವಿಸಿದೆ.ಯಾದಗಿರಿ ಮತಕ್ಷೇತ್ರದಲ್ಲಿ ಖಾತೆಯನ್ನೇ ತೆರೆಯದ ಬಿಜೆಪಿ ವೆಂಕಟರಡ್ಡಿ ಮುದ್ನಾಳ 62,227 ಅತ್ಯಧಿಕ ಮತಗಳನ್ನು ಪಡೆದು ಗೆಲುವಿನ ನಗೆ ಬೀರಿದ್ದಾರೆ. ಅತ್ತ ಸುರಪುರ ಮತಕ್ಷೇತ್ರದಲ್ಲಿ ಮಾಜಿ ಸಚಿವ ರಾಜುಗೌಡ 10,4426ಮತಗಳನ್ನು ಪಡೆದು ಕೈಬಲಕ್ಕೆ ಸೆಡ್ಡು ಹೊಡೆದಿದ್ದಾರೆ. ಆದರೆ ಶಹಾಪುರದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಶರಣಬಸ್ಪಪ್ಪಗೌಡ ದರ್ಶನಾಪುರ ಗೆಲುವ ಸಾಧಿಸುವ ಮೂಲಕ ಕೈ ಮಾನ ಕಾಪಾಡಿದ್ದಾರೆ. ಯಾದಗಿರಿ ಮತಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿ ವೆಂಕಟರಡ್ಡಿ ಮುದ್ನಾಳ 62,227 ಮತ ಪಡೆದು ಗೆಲುವು ಸಾಧಿಸಿದ್ದು, ಸಮೀಪ ಸ್ಪರ್ಧಿ ಡಾ.ಎ.ಬಿ.ಮಾಲಕರಡ್ಡಿ 49,346 ಮತ ಪಡೆದು ಸೋಲು ಅನುಭವಿಸಿದ್ದಾರೆ. ಗುರುಮಠಕಲ್ ಮತಕ್ಷೇತ್ರದಲ್ಲಿ ಜೆಡಿಎಸ್ ಅಭ್ಯರ್ಥಿ ನಾಗನಗೌಡ ಕಂದಕೂರ 79,627 ಮತ ಪಡೆದು ಗೆಲುವು ಸಾಧಿಸಿದ್ದು, ಕಾಂಗ್ರೆಸ್ ಅಭ್ಯರ್ಥಿ ಬಾಬುರಾವ್ ಚಿಂಚನಸೂರ 55147 ಮತ ಪಡೆದು ಸೋಲು ಅನುಭವಿಸಿದ್ದಾರೆ. ಶಹಾಪುರದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಶರಣಬಸ್ಪಪ್ಪಗೌಡ ದರ್ಶನಾಪುರ 78642 ಮತ ಪಡೆದು ಗೆಲವು ಸಾಧಿಸಿದ್ದಾರೆ. ಬಿಜೆಪಿ ಅಭ್ಯರ್ಥಿ ಗುರುಪಾಟೀಲ ಶಿರವಾಳ 47,668 ಮತ ಪಡೆದು ಸೋಲನ್ನು ಅನುಭವಿಸಿದ್ದಾರೆ. ಸುರಪುರ ಮತಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿ ಮಾಜಿ ಸಚಿವ ರಾಜುಗೌಡ (ನರಸಿಂಹ ನಾಯಕ) 104426 ಮತ ಪಡೆದು ಗೆಲುವು ಸಾಧಿಸಿದ್ದರೆ, ಕಾಂಗ್ರೆಸ್‌ನ ಅಭ್ಯರ್ಥಿ ರಾಜಾ ವೆಂಕಟಪ್ಪ ನಾಯಕ 81,858 ಮತ ಪಡೆದು ಸೋಲನ್ನು ಅನುಭವಿಸಿದ್ದಾರೆ.

ಬೆಳಗಾವಿ

ಕಾಂಗ್ರೆಸ್	ಬಿಜೆಪಿ	ಜೆಡಿಎಸ್
08	10	00

ಗೆದ್ದು ಬೀಗಿದ ಕೇಸರಿ ಪಾಳಯ

ಬೆಳಗಾವಿ: ಜಿಲ್ಲೆಯ 18 ವಿಧಾನಸಭಾ ಮತಕ್ಷೇತ್ರಗಳಲ್ಲಿ ಈ ಸಲದ ವಿಧಾನಸಭಾ ಚುನಾವಣೆಯಲ್ಲಿ ಹಳಬರು ಹಾಗೂ ಹೊಸಬರನ್ನು ಮತದಾರರು ಆಯ್ಕೆ ಮಾಡಿದ್ದು, ವಿಶೇಷ. ಬಿಜೆಪಿಯಿಂದ ಹಾಲಿ ಶಾಸಕ ಹುಕ್ಕೇರಿಯಿಂದ ಉಮೇಶ ಕತ್ತಿ, ರಾಯಭಾಗದಿಂದ ದುರ್ಯೋಧನ ಐಹೊಳೆ, ಕುಡಚಿಯಿಂದ ಪಿ.ರಾಜೀವ, ಅರಬಾವಿಯಿಂದ ಬಾಲಚಂದ್ರ ಜಾರಕಿಹೊಳಿ, ನಿಪ್ಪಾಣಿಯಿಂದ ಶಶಿಕಲಾ ಜೊಲ್ಲೆ, ಸವದತ್ತಿ ಯಲ್ಲಮ್ಮದಿಂದ ಆನಂದ ಮಾಮನಿ, ಬೆಳಗಾವಿ ದಕ್ಷಿಣದಿಂದ ಅಭಯ ಪಾಟೀಲ, ರಾಮದುರ್ಗದಿಂದ ಮಹಾದೇವಪ್ಪ ಯಾದವಾಡ ಹಾಗೂ ಹೊಸಬರಾದ ಬೆಳಗಾವಿ ಉತ್ತರದಲ್ಲಿ ಬಿಜೆಪಿಯ ಅನಿಲ್ ಬೆನಕೆ, ಕಿತ್ತೂರಿನಿಂದ ಮಹಾಂತೇಶ ದೊಡ್ಡಗೌಡರ್ ಆಯ್ಕೆಯಾಗಿದ್ದಾರೆ. ಕಾಂಗ್ರಸಿನಿಂದ ಹಾಲಿ ಶಾಸಕರಾದ ಗೋಕಾಕ್‌ನಿಂದ ರಮೇಶ ಜಾರಕಿಹೊಳಿ, ಚಿಕ್ಕೋಡಿಯ ಗಣೇಶ ಹುಕ್ಕೇರಿ, ಯಮಕನಮರಡಿಯ ಎಐಸಿಸಿ ಕಾರ್ಯದರ್ಶಿ ಸತೀಶ ಜಾರಕಿಹೊಳಿ, ಹೊಸ ಬರಾದ ಖಾನಾಪುರದಿಂದ ಡಾ. ಅಂಜಲಿ ನಿಂಬಾಳ್ಕರ್, ಬೈಲಹೊಂಗದ ವಿಧಾನ ಪರಿಷತ್ ಮಾಜಿ ಸದಸ್ಯ ಮಹಾಂತೇಶ ಕೌಜಲಗಿ, ಅಥಣಿಯ ಮಹೇಶ ಕುಮಠಳ್ಳಿ, ಕಾಗವಾಡದ ಶ್ರೀಮಂತ ಪಾಟೀಲ, ಕೆಪಿಸಿಸಿ ಮಹಿಳಾ ಘಟಕದ ರಾಜ್ಯಾಧ್ಯಕ್ಷೆ ಲಕ್ಷ್ಮೀ ಹೆಬ್ಬಾಳ್ಕರ್ ಗೆಲುವು ಸಾಧಿಸಿದ್ದಾರೆ. 2013ರಲ್ಲಿ ಬಿಎಸ್‌ಆರ್, ಕೆಜೆಪಿ ಶಾಸಕರು ಬಿಜೆಪಿಗೆ ಸೇರಿದ್ದರಿಂದ ಜಿಲ್ಲೆಯಲ್ಲಿ ಬಿಜೆಪಿ ಒಟ್ಟು 10 ಸ್ಥಾನಗಳಲ್ಲಿ ಶಾಸಕರನ್ನು ಹೊಂದಿದ್ದು, 6ರಲ್ಲಿ ಕಾಂಗ್ರೆಸ್ ಶಾಸಕರಿದ್ದರು. 2 ಸ್ಥಾನದಲ್ಲಿದ್ದ ಎಂಇಎಸ್, ಈ ಬಾರಿ ಎರಡೂ ಸ್ಥಾನ ಕಳೆದುಕೊಂಡಿದೆ.

ರಾಯಚೂರು

ಕಾಂಗ್ರೆಸ್	ಬಿಜೆಪಿ	ಜೆಡಿಎಸ್
03	02	02

ಬಿಸಿಲ ನಾಡಲ್ಲಿ ಕೈ ಹಾವಳಿ

ರಾಯಚೂರು: ಜಿಲ್ಲಾ ವಿಧಾನಸಭಾ ಚುನಾವಣಾ ಫಲಿತಾಂಶ ಏರುಪೇರು ಗಳೊಂದಿಗೆ ಕಾಂಗ್ರೆಸ್ ಗೆಲುವಿನೊಂದಿಗೆ ಬೀಗಿತು. ಕಾಂಗ್ರೆಸ್, ಬಿಜೆಪಿ ಹಾಗೂ ಜೆಡಿಎಸ್ ಮಧ್ಯೆ ಭಾರೀ ಪೈಪೋಟಿಯ ಜತೆಗೆ ಪಕ್ಷೇತರ ಅಭ್ಯರ್ಥಿಗಳು ಇದಕ್ಕೆ ಹೊರತಾಗಿರಲಿಲ್ಲ. ಜಿಲ್ಲೆಯ 7 ವಿಧಾನಸಭಾ ಕ್ಷೇತ್ರಗಳ ಪೈಕಿ ಮಾನ್ವಿ ವಿಧಾನ ಸಭಾ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ರಾಜಾ ವೆಂಕಟಪ್ಪ ನಾಯಕ ಜಯಗಳಿ ಸಿದರು. ರಾಯಚೂರಿನ ಬಿಜೆಪಿ ಅಭ್ಯರ್ಥಿ ಡಾ.ಶಿವರಾ ಜ್ ಪಾಟೀಲ್, ರಾಯಚೂರು ಗ್ರಾ. ದದ್ದಲ ಬಸನಗೌಡ, ಸಿಂಧನೂರಿನ ಜೆಡಿಎಸ್ ಅಭ್ಯರ್ಥಿ ವೆಂಕಟರಾವ್ ನಾಡಗೌಡ, ಮಸ್ಕಿಯ ಕಾಂಗ್ರೆಸ್ ಸ್ಪರ್ಧಿ ಪ್ರತಾಪ್ ಗೌಡ, ದೇವದುರ್ಗದಲ್ಲಿ ಬಿಜೆಪಿಯ ಶಿವನಗೌಡ ನಾಯಕ್, ಲಿಂಗಸಗೂರಿನಲ್ಲಿ ಕಾಂಗ್ರೆಸ್ ಅಭ್ಯರ್ಥಿ ಗೆಲುವಿನ ನಗಾರಿ ಬಾರಿಸಿದರು. ಸಿಂಧನೂರು ವಿಧಾನ ಸಭಾ ಕ್ಷೇತ್ರದಲ್ಲಿ ಪ್ರಥಮವಾಗಿ ಕಾಂಗ್ರೆಸ್, ಜೆಡಿಎಸ್ ನಡುವೆ ನೇರ ಹಣಾಹಣಿ ನಡೆದಿದ್ದು, ಕೊನೆಯ ಹಂತದಲ್ಲಿ ಜೆಡಿಎಸ್ ವಿಜಯ ಮಾಲೆ ಧರಿಸಿತು. ಗ್ರಾಮಾಂತರದಲ್ಲಿ ಕಾಂಗ್ರೆಸ್ ಬಿಜೆಪಿ ಮಧ್ಯೆ ಪೈಪೋಟಿ ಕಂಡರೂ, ಗೆಲ್ಲುವ ಕುದುರೆಯಂತಿದ್ದ ಜೆಡಿಎಸ್ ಅಭ್ಯರ್ಥಿ ರವಿ ಪಾಟೀಲ್‌ಗೆ ಕಾಂಗ್ರೆಸ್ ಎದುರು ಭಾರೀ ಮುಖಭಂಗವಾಯಿತು. ದೇವದುರ್ಗದಲ್ಲಿ ಬಿಜೆಪಿಯ ಹಾಲಿ ಶಾಸಕ, ಮಾವ ಕಾಂಗ್ರೆಸ್ ಅಭ್ಯರ್ಥಿ ರಾಜಶೇಖರ ನಾಯಕ್ ಜಯ ಸಾಧಿಸಿದರು.

ಮಕ್ಕಿ ಕ್ಷೇತ್ರದಲ್ಲಿ ಹಲವು ಹಂತದವರಿಗೆ ಮುಂದಿದ್ದ ಬಸನಗೌಡ ತುರಿಹಾಳ, ಕೊನೆಗೆ ಕಾಂಗ್ರೆಸ್‌ನ ಪ್ರತಾಪ್ ಗೌಡ ಎದುರು ಪರಾಭವಗೊಂಡರು.

ಬಾಗಾಲಕೋಟೆ

ಕಾಂಗ್ರೆಸ್	ಬಿಜೆಪಿ	ಜೆಡಿಎಸ್
02	05	00

ಎರಡು ರನ್‌ಗೇ ಔಟಾದ ಕಾಂಗ್ರೆಸ್

ಬಾಗಲಕೋಟೆ: ಬಾಗಲಕೋಟೆ ಜಿಲ್ಲೆಯ ರಾಜಕಾರಣದಲ್ಲಿ ಮಂಗಳವಾರ ಬಿಜೆಪಿಗೆ ಶುಭ ಮಂಗಳವನ್ನು ಹಾಡಿದೆ. ಜಿಲ್ಲೆ ಏಳು ಕ್ಷೇತ್ರದಲ್ಲಿ ಬಾದಾಮಿ ಮತ್ತು ಜಮಖಂಡಿ ಕ್ಷೇತ್ರ ಕಾಂಗ್ರೆಸ್ ಪಾಲಾಗಿವೆ. ಉಳಿದ ಪಂಚ ಕ್ಷೇತ್ರದಲ್ಲಿ ಬಿಜೆಪಿ ತನ್ನ ಕಮಲವನ್ನು ಅರಳಿಸಿದೆ. ಬಾದಾಮಿಯಲ್ಲಿ ಸಿದ್ದರಾಮಯ್ಯ ಅಲ್ಪ ಮತಗಳಿಂದ ಗೆಲುವನ್ನು ಸಾಧಿಸಿದ್ದಾರೆ. ಪ್ರತಿಸ್ಪರ್ಧಿ ಬಿಜೆಪಿ ಅಭ್ಯರ್ಥಿ ಶ್ರೀರಾಮುಲು ಸೋಲುಂಡಿದ್ದಾರೆ. ಬಾಗಲಕೋಟೆ